

# 'ಪಾರಂಪರಿಕ ಪ್ರಾಣಿ'ಯ ಹೆಜ್ಜೆ ಹುಡುಕುತ್ತಾ...

ಯಳಂದೂರು: ಆನೆ ಹಾದಿಯಲ್ಲಿ ಕ್ಯಾಮೆರಾ ಕಣ್ಣು. ಗಜರಾಜನ ಆಗಮನ ಆಗುತ್ತಿದ್ದಂತೆ ಚಿತ್ರ ತೆಗೆಯುತ್ತದೆ. ಜಿಪಿಎಸ್ ನೆರವಿನಿಂದ ಆನೆ ಹಾದುಹೋದ ದಾರಿ ಗೋಚರಿಸುತ್ತದೆ. ಇದರ ನೆರವು ಪಡೆದು, ಆನೆಯ ಹೆಜ್ಜೆಯ ಗುರುತು ಹಿಡಿದು ಭೂಪಟ ತಯಾರಿಸಲು ಸಂಶೋಧನ ನಿರತರಾಗಿದ್ದಾರೆ ಪರಮೇಶ ಮಲ್ಲೇಗೌಡ.

ಬಿಆರ್‌ಟಿ ಅರಣ್ಯದ ನಡುವೆ 3 ಆನೆ ಕಾರಿಡಾರ್ ಗುರುತಿಸಲಾಗಿದೆ. ಪೂರ್ವದಲ್ಲಿ ಕೊಳ್ಳೇಗಾಲ ಅರಣ್ಯ ಪ್ರದೇಶ ಸಂಪರ್ಕಿಸುತ್ತದೆ. ಉಳಿದೆರಡು ದಕ್ಷಿಣದಲ್ಲಿ ಸತ್ಯಮಂಗಲ ವನ್ಯಧಾಮ ಕೂಡುತ್ತದೆ. ಆನೆಗಳು ನೀರು, ಮೇವಿಗಾಗಿ ಈ ದೂರ ಕ್ರಮಿಸುತ್ತವೆ ಹಾಗೂ ಸಂಚರಿಸುತ್ತವೆ. ಇದೇ ಅವುಗಳ ಮೊಗಸಾಲೆ.

ಭಾರತದಲ್ಲಿ ಸದ್ಯ 28 ಸಾವಿರ ಗಜ ಸಂತತಿ ಇದೆ. ಪರಿಸರ ಸಚಿವಾಲಯ 'ಎಲಿಫೆಂಟ್ ಪ್ರಾಜೆಕ್ಟ್' 1992ರಿಂದಲೇ ರೂಪಿಸಿ. 'ಎಲಿಫೆಂಟ್ ಟಾಸ್ಕ್‌ಫೋರ್ಸ್' ರಚಿಸಿ ಆನೆ ಸಂರಕ್ಷಣೆಗೂ ಮುಂದಾಗಿದೆ.

ಬಿಳಿಗಿರಿಬೆಟ್ಟದ ಅರಣ್ಯದಲ್ಲಿ ನೂರಾರು ಸಂಖ್ಯೆಯಲ್ಲಿ ಆನೆಗಳ ಹಿಂಡು ಕಾಣಬರುತ್ತಿತ್ತು. ಈಗ ಜನವಸತಿ ಇರುವ ಬಂಗಲೆಪೋಡು ಆನೆಗಳ ಮೊಗಸಾಲೆ ಆಗಿತ್ತು ಎಂದೂ ಜೆ.ಪಿ.ಆ್ಯಂಡರ್‌ಸನ್ 'ವೈಲ್ಡ್ ಬೀಸ್ಟ್ ಆಫ್ ಇಂಡಿಯಾ'ದಲ್ಲಿ ದಾಖಲಿಸಿದ್ದಾರೆ.

ಪರಿಸರ ಸಂರಕ್ಷಣೆಯಲ್ಲಿ ಆನೆಗಳ ಕೊಡುಗೆ ಅಪಾರ. ಅಳಿವಿನಂಚಿನ ಸಸ್ಯ, ಬೀಜಗಳ ಪ್ರಸಾರ ಹಾಗೂ ಪರಾಗಸ್ಪರ್ಶ ಕ್ರಿಯೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಕೆಲವು ವೃಕ್ಷ ಚಿಗುರಲು, ಬೀಜ ಪೋಷಣೆ ಪಡೆದು ಮೊಳೆಯಲು ಆನೆ ತಿಂದು ವಿಸರ್ಜಿಸಿದ ಲದ್ದಿ ಕಾರಣ. ಆದರೆ ಇತ್ತೀಚಿನ ದಿನಗಳಲ್ಲಿ ಆನೆ ಮಾನವರ– ಸಂಘರ್ಷ ಮಿತಿ ಮೀರಿ ಆನೆಗಳ ಸಾವಿಗೆ ಕಾರಣವಾಗಿದೆ.

'ಕೃಷಿ, ವಸತಿ, ಒತ್ತುವರಿ, ಗಣಿಗಾರಿಕೆ, ರಸ್ತೆ, ಮರ ಸಂಗ್ರಹಣೆಗಾಗಿ ಆನೆಗಳ ಆವಾಸ ಅತಿಕ್ರಮಿಸುವ ಮಾನವನಿಂದಾಗಿ ನಾಡಿನತ್ತ ಮುಖ ಮಾಡುತ್ತವೆ. ಕೆಲವು ಆನೆ ವಿದ್ಯುತ್ ಸ್ಪರ್ಶದಿಂದ ಸಾಯುತ್ತವೆ. ಇದೇ ವೇಗದಲ್ಲಿ ಸಾವು ಮುಂದುವರೆದರೆ 20 ವರ್ಷಗಳಲ್ಲಿ ಆನೆ ಸಂತತಿ ನಶಿಸುತ್ತದೆ' ಎನ್ನುತ್ತಾರೆ ಕಳೆದೊಂದು ವರ್ಷದಿಂದ ಆನೆ ಚಲನ ವಲನಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ಪರಮೇಶ್.

ಭಾರತದ ಅತಿ ದೊಡ್ಡ ಭೂಸಸ್ತನಿ ಆನೆ. ಈಗ 'ಪಾರಂಪರಿಕ ಪ್ರಾಣಿ'ಯ ಅಭಿದಾನ ಲಭಿಸಿದೆ. ಆದರೆ ಅರಣ್ಯಗಳಲ್ಲಿ ಸ್ವಚ್ಛಂದವಾಗಿ ವಿಹರಿಸುವ ಹಾದಿಯಲ್ಲಿ ಅನೇಕ ಜನವಸತಿಗಳು ಇವೆ. ಗಜ ಮಾರ್ಗದಲ್ಲಿ ಅವರು ಉಳುಮೆ ಮಾಡುತ್ತಿದ್ದಾರೆ. ಇದರಿಂದ ದಾಳಿ, ಬೆಳೆನಾಶ, ಆನೆ ಸರಣಿ ಸಾವಿಗೆ ಕಾರಣವಾಗುತ್ತದೆ. ಇದನ್ನು ತಪ್ಪಿಸಿ ಆನೆಗಳಿಗೆ ನೆಲೆ ಒದಗಿಸಲು 'ವೈಲ್ಡ್‌ಲೈಫ್ ಟ್ರಸ್ಟ್ ಆಫ್ ಇಂಡಿಯ' ದೇಶದಲ್ಲಿ 88 ಆನೆ ಕಾರಿಡಾರ್ ಗುರುತಿಸಿದೆ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಸಿಂಧುವಳ್ಳಿ ಪರಮೇಶ್ ಮಲ್ಲೇಗೌಡ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನವರು. ಮೈಸೂರು ವಿವಿಯಲ್ಲಿ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ ಪಡೆದಿದ್ದಾರೆ. ಮಣಿಪಾಲ್ ವಿವಿಯಲ್ಲಿ ಬೆಂಗಳೂರಿನ 'ಏಟ್ರೀ' ಸಂಸ್ಥೆ ನೆರವಿನಿಂದ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

'ವನ್ಯಜೀವಿ ಮಾನವನ ನಡುವಿನ ಸಂಘರ್ಷ, ತಡೆಗಟ್ಟುವ ಬಗೆ, ಅರಣ್ಯ ಅವಲಂಬಿತ ಜನರ ಜೀವನಶೈಲಿ, ಸಂರಕ್ಷಣೆಯಲ್ಲಿ ಅವರ ಸಹಭಾಗಿತ್ವ, ಆನೆ ಮೊಗಸಾಲೆ ಪುನರುತ್ಥಾನಕ್ಕೆ ಸೂಕ್ತ ಗಿಡ ಮರಗಳ ಅವಶ್ಯಕತೆ ಹಾಗೂ 'ಸಮಗ್ರ ಕಾರಿಡಾರ್ ಸಂರಕ್ಷಣಾ ಯೋಜನೆ' ರೂಪಿಸುವುದು ಇವರ ಉದ್ದೇಶವಾಗಿದೆ'.

-ಗೂಳೀಪುರ ನಾ. ಎಂಜು.



